**O.S.No.125/2019**
**D.W-3**

**ಸಾಕ್ಷಿಯನ್ನು ದಿಃ03.08.2026 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ. ಜೆ ಆರ್ ವಕೀಲರಿಂದ:**

ಮೃತ ವಾದಿಯನ್ನು ನಾನು ನೋಡಿರುತ್ತೇನೆ. 1ನೇ ಪ್ರತಿವಾದಿಯ ತಂದೆಯನ್ನು ನಾನು ನೋಡಿರುತ್ತೇನೆ. 1ನೇ ಪ್ರತಿವಾದಿಯ ತಂದೆಯ ಹೆಸರು ನನಗೆ ಗೊತ್ತಿಲ್ಲ. ಈ ದಾವೇಯನ್ನು ಮೃತ ವಾದಿಯ ತಾಯಿ ಸಲ್ಲಿಸಿರುತ್ತಾರೆ. ಈ ದಾವೇಯನ್ನು ಏಕೆ ಸಲ್ಲಿಸಲಾಗಿದೆ ಎಂದು ನನಗೆ ಗೊತ್ತಿಲ್ಲ. ಈ ದಾವಾ ಆಸ್ತಿಯಲ್ಲಿ 2ನೇ ಪ್ರತಿವಾದಿಯು ಸ್ವಾಧೀನದಲ್ಲಿ ಇರುತ್ತಾರೆ. 2ನೇ ಪ್ರತಿವಾದಿ ಸ್ವಾಧೀನದಲ್ಲಿರುವ ಬಗ್ಗೆ ಬಿಟ್ಟು ಬೇರ ಏನು ನನಗೆ ಗೊತ್ತಿಲ್ಲ. ಮೃತ ವಾದಿ ಮತ್ತು 2ನೇ ಪ್ರತಿವಾದಿಯ ತಂದೆಯ ನಡುವೆ ಏನು ವ್ಯವಹಾರ ಆಗಿದೆ ಎಂದು ನನಗೆ ಗೊತ್ತಿಲ್ಲ.

2. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಅಡಮಾನ ಪತ್ರವನ್ನು ನೋಡಿರುತ್ತೇನೆ. ಸದರಿ ಪತ್ರವನ್ನು ನಾನು ಓದಿದ್ದು, ಅದರಲ್ಲಿ ಷರಾ ಇರಲಿಲ್ಲ. ಸದರಿ ಪತ್ರವನ್ನು 2ನೇ ಪ್ರತಿವಾದಿಯ ತಂದೆ ಮರಿಯಪ್ಪ ಗದ್ದೆ ಹತ್ತಿರ 50 ವರ್ಷಗಳ ಹಿಂದೆ ತೋರಿಸಿರುತ್ತಾರೆ. ಸದರಿ ಪತ್ರದ ಒಕ್ಕಣೆಯನ್ನು ನನಗೆ ಓದಿ ಹೇಳಲಿಲ್ಲ. ಸದರಿ ಅಡಮಾನ ಪತ್ರದ ವ್ಯವಹಾರ ನನ್ನ ಮುಂದೆ ಆಗಿರುವುದಿಲ್ಲ. ಸದರಿ ಅಡಮಾನ ಪತ್ರದ ವಿಚಾರಗಳನ್ನು ನನಗೆ ಓದಿ ಹೇಳಲಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿರುವ ವಿಚಾರಗಳನ್ನು 2ನೇ ಪ್ರತಿವಾದಿಯೇ ಹೇಳಿ ತಯಾರು ಮಾಡಿಸಿದ್ದರು.

3. ಮೃತ ವಾದಿಯ ಗಂಡನ ಹೆಸರು ನನಗೆ ಗೊತ್ತಿಲ್ಲ. ದಾವಾ ಸರ್ವೆ ನಂಬರ್ ಮತ್ತು ವಿಸ್ತೀರ್ಣ ನನಗೆ ಗೊತ್ತಿಲ್ಲ. 2ನೇ ಪ್ರತಿವಾದಿಯ ತಂದೆಯ ಹೆಸರು ನಾರಾಯಣ್ಣ ಶೆಟ್ಟಿ ಎಂದರೆ ಸಾಕ್ಷಿಯು ಮರಿಯಪ್ಪ ಎಂದೂ ಸಹ ಕರೆಯುತ್ತಿದ್ದರು ಎಂದು ನುಡಿಯುತ್ತಾರೆ.

4. ದಾವಾ ಆಸ್ತಿಯ ಕುರಿತು ದಿನಾಂಕ 19.09.1991 ರಲ್ಲಿ ರೂ.6,000/-ಕ್ಕೆ ವಾದಿ ಪ್ರತಿವಾದಿಗಳ ತಂದೆಗೆ ಭೋಗ್ಯ ಮಾಡಿದರು ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ವಾದಿ ಏನು ದಾಖಲೆಗಳನ್ನು ಸಲ್ಲಿಸಿದ್ದಾರೆ ಎಂದು ನಾನು ತಿಳಿದುಕೊಂಡಿಲ್ಲ. 1973 ರಿಂದ ಪ್ರತಿವಾದಿಗಳ ಕುಟುಂಬ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ಭೋಗ್ಯದ ವಿಚಾರವನ್ನು 2ನೇ ಪ್ರತಿವಾದಿಯ ತಂದೆ ಹೇಳಿದ್ದರು. ಸಾಕ್ಷಿ ಮುಂದುವರೆದು, ಹೆಚ್ಚುವರಿ ಹಣ ಕೇಳಲು ವಾದಿಯ ತಾಯಿ ಬರುತ್ತಾರೆ ಎಂದು ಪ್ರತಿವಾದಿಯ ತಂದೆ ಪತ್ರ ತೋರಿಸಿದ್ದರು ಎಂದು ನುಡಿಯುತ್ತಾರೆ. ಈ ದಾವೇಯ ಏನು ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

5. ದಾವಾ ಆಸ್ತಿಗೂ ನನ್ನ ಆಸ್ತಿಗೂ ಅರ್ಧ ಕಿಲೋಮೀಟರ್ ಅಂತರವಿರುತ್ತದೆ. ಪ್ರತಿವಾದಿಗಳು ಸ್ವಾಧೀನವನ್ನು ಕೊಡದೇ ವಾದಿಗಳಿಗೆ ತೊಂದರೆ ನೀಡುತ್ತಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು, 1973ರಲ್ಲಿ ಆಗಿದ್ದ ಭೋಗ್ಯ ಪತ್ರವನ್ನು ತಾನು ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳ ಮಾತು ಕೇಳಿ ಅವರಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**O.S.No.125/2019**
**D.W-3**

**<u>ಮರುವಿಚಾರಣೆಃ ಇಲ್ಲ</u>**

*( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)*

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ .
ಕುಣಿಗಲ್.